# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2017-18ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡುವ ಬಗ್ಗೆ.

ಓದಲಾದ

1. ಸರ್ಕಾರದ ಆದೇಶ ಸಂಖ್ಯೆ:MWD 175 MDS 2016 ದಿನಾಂಕ:03-01-2017 ಮತ್ತು ತಿದ್ದುಪಡಿ ಆದೇಶ ದಿನಾಂಕ:27-01-2017.
2. ಸರ್ಕಾರದ ಆದೇಶ ಸಂಖ್ಯೆ: MWD 169 MDS 2017 ದಿನಾಂಕ :06-04-2017, 14-08-2017, 13-10-2017
3. ಸರ್ಕಾರದ ಆದೇಶ ಸಂಖ್ಯೆ: MWD 82 WES 2017 ದಿನಾಂಕ:18-08-2017, 06-10-2017
4. ಸರ್ಕಾರದ ಆದೇಶ ಸಂಖ್ಯೆ: MWD 82 WES 2017 ದಿನಾಂಕ: 09-11-2017,
5. ಸರ್ಕಾರದ ಆದೇಶ ಸಂಖ್ಯೆ: MWD 82 WES 2017 ದಿನಾಂಕ: 03-12-2017
6. ಸರ್ಕಾರದ ಆದೇಶ ಸಂಖ್ಯೆ: MWD 169 MDS 2017 ದಿನಾಂಕ:09-01-2018
7. ಸರ್ಕಾರದ ಆದೇಶ ಸಂಖ್ಯೆ: MWD 02 WES 2018 ದಿನಾಂಕ:16-01-2018
8. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಅಸಂನಿ/ಮದರಸ/ಸಿಆರ್-/2017-18, ದಿನಾಂಕ:18-01-2018.

******

<u>ಪ್ರಸ್ತಾವನೆ:</u>

ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ 2016-17ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಿಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡುವ ಯೋಜನೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮೇಲೆ ಓದಲಾದ ಕ್ರ.ಸಂ.(1) ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(2) ರಲ್ಲಿ ಮದರಸದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಸಲುವಾಗಿ (Providing quality Education in Madrasa) 2017-18ನೇ ಸಾಲಿನ ಆಯವ್ಯಯ **ಲೆಕ್ಕ ಶೀರ್ಷಿಕೆ 2225-03-102-3-10(103)** ಸರ್ಕಾರದಿಂದ ರೂ.50.00ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಅದರಲ್ಲಿ ಮೊದಲನೇ, ಎರಡನೇ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಒಟ್ಟು ರೂ.37.50ಕೋಟಿ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(3) ರಲ್ಲಿ 29 ಜಿಲ್ಲೆಗಳಲ್ಲಿರುವ 168 ಮದರಸಗಳಿಗೆ ಆಧುನಿಕರಣ, ಔಪಚಾರಿಕ, ಗಣಕೀಕೃತ ಶಿಕ್ಷಣ ನೀಡಲು ಒಟ್ಟು ರೂ.14,92,00000/- ಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಉಳಿಕೆ ರೂ.22,58,00000/-ಗಳು ಬಾಕಿಯಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(4) ರಲ್ಲಿ 10 ಜಿಲ್ಲೆಗಳಲ್ಲಿರುವ 51 ಮದರಸಗಳಿಗೆ ಆಧುನಿಕರಣ, ಔಪಚಾರಿಕ, ಗಣಕೀಕೃತ ಶಿಕ್ಷಣ ನೀಡಲು ಒಟ್ಟು ರೂ.4,66,00000/-ಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಉಳಿಕೆ ರೂ.17,92,00000/-ಗಳು ಬಾಕಿಯಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(5) ರಲ್ಲಿ 13 ಜಿಲ್ಲೆಗಳಲ್ಲಿರುವ 68 ಮದರಸಗಳಿಗೆ ಆಧುನಿಕರಣ ಔಪಚಾರಿಕ, ಗಣಕೀಕೃತ ಶಿಕ್ಷಣ ನೀಡಲು ಒಟ್ಟು ರೂ.5,88,00000/-ಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಉಳಿಕೆ ರೂ.12,04,00000/-ಗಳು ಬಾಕಿಯಿರುತ್ತದೆ.

ಮೇಲೆ ಓದಲಾದ ಕ್ರ.ಸಂ(6) ರಲ್ಲಿ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನ ಒಟ್ಟು ರೂ.12.50ಕೋಟಿ ಬಿಡುಗಡೆ ಮಾಡಲಾಗಿರುತ್ತದೆ. ಉಳಿಕೆ ಒಟ್ಟು ಅನುದಾನ ರೂ.24,54,00000/- ಗಳಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(7) ರಲ್ಲಿ ವಿಜಯಪುರ ಜಿಲ್ಲೆಯ ಕೆ.ಎಂ.ಇ. ಸೊಸೈಟಿ ವತಿಯ ಇಖ್ರಾ ಮದರಸಕ್ಕೆ ರೂ.4.00ಲಕ್ಷ ಅನುದಾನ ಬಿಡುಗಡೆ ಮಾಡಿ ತಿದ್ದುಪಡಿ ಆದೇಶ ಹೊರಡಿಸಲಾಗಿರುತ್ತದೆ. ಉಳಿಕೆ ಅನುದಾನ ಒಟ್ಟು ರೂ.24,50,00000/- ಗಳಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(8)ರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ಇವರಿಂದ ರಾಜ್ಯದಲ್ಲಿರುವ ಮದರಸಗಳಿಗೆ ಆಧುನಿಕರಣ, ಔಪಚಾರಿಕ, ಗಣಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಗಳು ಬಂದಿದ್ದು ಸದರಿ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: MWD 82 WES 2017, (5)
## ಬೆಂಗಳೂರು, ದಿನಾಂಕ:05-01-2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅನುಬಂಧದಲ್ಲಿ ಸೂಚಿಸಿರುವಂತೆ ಐದನೇ ಹಂತದಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿರುವ 41 ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು 2017-18ನೇ ಸಾಲಿನ ಆಯವ್ಯಯ **ಲೆಕ್ಕ ಶೀರ್ಷಿಕೆ:2225-03-102-3-10(103)** ರಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನ ರೂ.50.00ಕೋಟಿಗಳ ಪೈಕಿ ಮೊದಲನೇ, ಎರಡನೇ ತ್ರೈಮಾಸಿಕ ಮೂರನೇ ಹಾಗೂ ನಾಲ್ಕನೇ ಕಂತಿನ ಅನುದಾನ ರೂ.50.00ಕೋಟಿ ಈಗಾಗಲೇ ಬಿಡುಗಡೆ ಮಾಡಲಾಗಿದ್ದು. ಸದರಿ ಅನುದಾನದಲ್ಲಿ **ರೂ.3,98,00000/-(ಮೂರು ಕೋಟಿ ತೊಂಭತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)** ಅನುದಾನವನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವಂತೆ ಜಿಲ್ಲಾವಾರು ಮಂಜೂರು ಮಾಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಆದೇಶಿಸಿದೆ.

**ಷರತ್ತುಗಳು :**

1. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ:- "2225-03-102-3-10(103)" ಮದರಸಾಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸಹಾಯಧನ ರಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.
2. ಸದರಿ ಅನುದಾನವು ಒಂದು ಸಂಸ್ಥೆಗೆ ಕೇವಲ ಒಂದು ಬಾರಿ ಮಾತ್ರ ಪಡೆದುಕೊಳ್ಳಲು ಅವಕಾಶವಿರುತ್ತದೆ. (One time Grants)